Amount Sanctioned for Famine Relief and other Developmental Activitles in Shimoga District

426. Sri KONANDUR LINGAPPA (Thirthahalli).—

Will the Minister for Revenue be pleased to state :—

(*a*) the amount sanctioned by Government for famine relief and other developmental activities during this year in Shimoga District ;

(*b*) the names of taluks and the amount sanctioned in the District ?

Sri N. HUTCHAMASTHY GOWDA (Minister for Revenue).—

(*a*) Rs. 23, 33, 020.

(*b*)		Rs.
Shimoga	...	3,50,166
Bhadravathi	...	1,53,258
Channagiri	...	2,03,897
Honnali	...	2,69,835
Shikaripura	...	4,47,500
Sorab	...	2,13,500
Sagar	...	1,35,500
Hosanagar	...	2,03,500
Thirthahalli	...	2,08,500

ಶ್ರೀ ಕೋಣಂದೂರು ಲಿಂಗಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ, ಉತ್ತರದಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ ಶಿಕಾರಿಪುರ ತಾಲ್ಲೂಕಿಗೆ ನಾಲ್ಕೂವರೆ ಲಕ್ಷ ರೂಪಾಯಿ ಕೊಟ್ಟಿದ್ದಾರೆ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ ತಾಲ್ಲೂಕುಗಳಿಗೆ ಒಂದು ಲಕ್ಷ, ಎರಡು ಲಕ್ಷ ಮಾತ್ರ ಕೊಟ್ಟಿರುವ ತಾರತಮ್ಯವನ್ನು ಏಕೆ ಮಾಡಿದ್ದಾರೆ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಯಾವ ಭಾಗದಲ್ಲಿ ಎಷ್ಟು ನಷ್ಟವಾಗಿದೆ ಎಂದು ನೋಡಿಕೊಂಡು, ಎಷ್ಟು ತೊಂದರೆ ಎನ್ನುವ ಅಂದಾಜು ಮಾಡಿ ಕೊಡಲಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ನಾಲ್ಕೂವರೆ ಲಕ್ಷ ರೂಪಾಯಿ ಕೊಟ್ಟಿರುವ ತಾಲ್ಲೂಕಿನಲ್ಲಿ ಏನು ತೊಂದರೆಯಿದೆಯೋ ಆದಕ್ಕಿಂತ ಹೆಚ್ಚಿನ ತೊಂದರೆ ಬೇರೆ ಕಡೆ ಇದ್ದರೂ ಅಲ್ಲಿಗೆ ಏಕೆ ಹೆಚ್ಚಾಗಿ ಕೊಟ್ಟಿಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೆಚ್ಚಾಗಿದೆ ಎನ್ನುವುದನ್ನು ನಾನು ಬೊದಲು ಒಪ್ಪುವುದೇ ಇಲ್ಲ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ತೊಂದರೆ ಇದೆ ಎಂದು ಅಂದಾಜು ಮಾಡಿ ಅದಕ್ಕನುಗುಣವಾಗಿ ಹಣ ಕೊಟ್ಟಿದೆ. ಜನಸಂಖ್ಯೆ ಅಥವಾ ವಿಸ್ತೀರ್ಣ ಇವುಗಳ ದಾಮಾಷಾ ಪ್ರಕಾರ ಹಂಚಿಕೆಯಾಗಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸರ್ಕಾರದವರು ಕೊಟ್ಟಿರುವ ಒಟ್ಟು ಹಣ ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಶಿವಮೊಗ್ಗ ಡಿವಿಜನ್ನುಗಳಿಗೆ. ಆಗ ತಾಲ್ಲೂಕಿಗೆ ಹಂಚಿಕೆಯಾಗಿರಲಿಲ್ಲ. ಡಿವಿಜನ್ನಿನಲ್ಲಿ ಕೊಟ್ಟ ಹಣ ಕೆಲವು ತಾಲ್ಲೂಕುಗಳಿಗೆ ಹೆಚ್ಚಾಗಿ ಒಂದೆರಡು ತಾಲ್ಲೂಕುಗಳಿಗೆ ಕಡಿಮೆಯಾಗಿದೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಆ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಕೆ. ಎಚ್. ಹನುಮೇ ಗೌಡ.—ಕೊಟ್ಟಿರುವ ಹಣದಲ್ಲಿ ಎಷ್ಟು ಖರ್ಚಾಗಿದೆ ? ತೆಗೆದು ಕೊಂಡ ಕೆಲಸಗಳೆಲ್ಲ ಪೂರ್ತಿಯಾಗಿವೆಯೇ ಅಥವಾ ಕೊಟ್ಟಿರುವ ಹಣ ಮುಗಿದು ಹಣ ಪಾವತಿಯಾಗದೆ ಇರುವ ಬಿಲ್ಲುಗಳಿವೆಯೇ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕೆಲಸ ನಡೆಯುತ್ತಲೇ ಇದೆ. ಈಗಾಗಲೇ ಡೆಪ್ಯುಟಿ ಕಮಿಷನರಿಂದ ಹಣ ಸಾಲದು, ಇನ್ನೂ ಐದು ಲಕ್ಷ ರೂಪಾಯಿ ಬೇಕು ಎಂದು ಬೇಡಿಕೆ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಕೊಟ್ಟಿರುವ ಹಣದಲ್ಲಿ, 64, ಫ್ಯಾಮಿನ್ ಹೆಡ್‌ನಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟು ಹಣವನ್ನು ಕೊಡಲಾಗಿದೆ, ಕ್ಯಾಷ್ ಪ್ರೋಗ್ರಾಂನಲ್ಲಿ ಎಷ್ಟು ಹಣ ಕೊಡಲಾಗಿದೆ ಎಂದು ಹೇಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಟ್ಟು 8,53,0-0 ರೂಪಾಯಿಗಳನ್ನು 64, ಫ್ಯಾಮಿನ್ ಹೆಡ್‌ನಲ್ಲಿ ಕೊಡಲಾಗಿದೆ. ಅದರಲ್ಲಿ ಶಿವಮೊಗ್ಗ ತಾಲ್ಲೂಕಿಗೆ 1,97,166 ರೂಪಾಯಿ, ಭದ್ರಾವತಿ ತಾಲ್ಲೂಕಿಗೆ 40.258 ರೂಪಾಯಿ, ಚನ್ನಗಿರಿ ತಾಲ್ಲೂಕಿಗೆ 90,897 ರೂಪಾಯಿ, ಹೊನ್ನಾಳಿ ತಾಲ್ಲೂಕಿಗೆ 1.46,835 ರೂಪಾಯಿ, ಷಿಕಾರಿಪುರ ತಾಲ್ಲೂಕಿಗೆ 3,11,500 ರೂಪಾಯಿ, ಸೊರಬ ತಾಲ್ಲೂಕಿಗೆ 50,500 ರೂಪಾಯಿ ಸಾಗರ, ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಿಗೆ ತಲಾ 500 ರೂಪಾಯಿ ಕೊಡಲಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮಂತ್ರಿಗಳು ಕೊಟ್ಟ ಅಂಕಅಂಶಗಳನ್ನು ನೋಡಿದರ ಉದ್ದೇಶಪೂರ್ವಕವಾಗಿ ನಮ್ಮ ಕೆಲವು ಕ್ಷೇತ್ರಗಳಿಗೆ, ತಾಲ್ಲೂಕುಗಳಿಗೆ ತಾರತಮ್ಯ ಮಾಡಿದ್ದಾರೆ. ದುರುದ್ದೇಶದಿಂದ ಹೀಗೆ ಮಾಡಿದ್ದಾರೆಂದು ಹೇಳುವ ಮಾತನ್ನು ಅವರು ಒಪ್ಪಿಕೊಳ್ಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇಲ್ಲ. ಮಾನ್ಯ ಸದಸ್ಯರು ಒಟ್ಟು ಹಣ ಖರ್ಚಾಗಿರುವುದನ್ನು ಲೆಕ್ಕ ಹಾಕಿಕೊಂಡರೆ ಅವರಿಗೇ ತಿಳಿಯುತ್ತದೆ. 44 ಐ.ಎನ್.ಇ.ಡಿ.ನಲ್ಲಿ ಬೇರೆ ತಾಲ್ಲೂಕುಗಳಲ್ಲಿ 10 ಸಾವಿರ, 20 ಸಾವಿರ ರೂಪಾಯಿ ಖರ್ಚಾಗಿದೆ. ಮುಖ್ಯವಾಗಿ ಆಯಾ ತಾಲ್ಲೂಕಿನಲ್ಲಿ ಯಾವ ಕಷ್ಟವಿದೆ ಎಂದು ತಿಳಿದುಕೊಂಡು ಯಾವ ಯಾವ ಬಾಬಿನಿಂದ ಎಷ್ಟೆಷ್ಟು ಖರ್ಚಾಗಿದೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು 64, ಫ್ಯಾಮಿನ್‌ನಲ್ಲಿ ಎಲ್ಲಿ ಹೆಚ್ಚು ಬೇಕೋ ಅಷ್ಟನ್ನು ಕೊಟ್ಟಿದೆ. ಒಟ್ಟಿನಲ್ಲಿ ಆಯಾ ತಾಲ್ಲೂಕಿನ ಅಭಾವ ಪರಿಸ್ಥಿತಿಯನ್ನು ನೋಡಿಕೊಂಡು ಕೊಟ್ಟಿದೆ. ಉದಾಹರಣೆಗೆ ಸಾಗರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಿಗೆ 64 ಫ್ಯಾಮಿನ್ ಹೆಡ್‌ನಲ್ಲಿ 500 ರೂಪಾಯಿ ಪ್ರಕಾರ ಖರ್ಚಾಗಿದ್ದರೂ ಕೂಡ ಐ.ಎನ್.ಇ.ಡಿ.ನಲ್ಲಿ 35 ಸಾವಿರ ರೂಪಾಯಿ ಪ್ರಕಾರ ಖರ್ಚಾಗಿದೆ. ಕ್ಯಾಷ್ ಪ್ರೋಗ್ರಾಂನಲ್ಲಿ ಸಾಗರ ತಾಲ್ಲೂಕಿನಲ್ಲಿ 1 ಲಕ್ಷ 89 ಸಾವಿರ, ಹೊಸನಗರದಲ್ಲಿ 1 ಲಕ್ಷ 68 ಸಾವಿರ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ 1 ಲಕ್ಷ 88 ಸಾವಿರ ರೂಪಾಯಿ ಖರ್ಚಾಗಿದೆ. ಶಿವಮೊಗ್ಗ ತಾಲ್ಲೂಕಿನಲ್ಲಿ 30 ಸಾವಿರ ರೂಪಾಯಿ ಮಾತ್ರ ಖರ್ಚಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಶಿವಮೊಗ್ಗ, ಸಾಗರ, ಷಿಕಾರಿಪುರ, ಹೊನ್ನಗರ ತಾಲ್ಲೂಕುಗಳಲ್ಲಿ ನುಮಾರು ನೂರು ಗ್ರಾಮಗಳಲ್ಲಿ ವರ್ಷೇ ವರ್ಷೇ ನ್ಯೂನ್ಯ ಕೊಂದರೆ ಇದೆ ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದಕ್ಕನುಗುಣವಾಗಿ ಆ ಪ್ರದೇಶದಲ್ಲಿ ಹೆಚ್ಚು ಕೆಲಸ ತೆಗೆದುಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಷಿಕಾರಿಪುರ ತಾಲ್ಲೂಕಿನಲ್ಲಿ ಮೂರು ಲಕ್ಷ ರೂಪಾಯಿ ಖರ್ಚು ಮಾಡಿ ತೀರ್ಥಹಳ್ಳಿ, ಸಾಗರ, ಹೊಸನಗರ ತಾಲ್ಲೂಕುಗಳಿಗೆ 500 ರೂಪಾಯಿ ಮಾತ್ರ ಖರ್ಚು ಮಾಡಿರುವುದರ ಅರ್ಥವೇನು ?

ಶ್ರೀ ಎಸ್. ಹುಚ್ಚಮಾಸ್ತಿ ಗೌಡ.—ಅರ್ಥ ನ್ಪಷ್ಟವಾಗಿ ಹೇಳಿದೆ. ಮಾನ್ಯ ಸದಸ್ಯರ ಪ್ರಭಾವವಿಲ್ಲ, ಅಥವಾ ಪ್ರಜಾನಂಖ್ಯೆಗೆ ಅನುಗುಣವಾಗಿ ಅಥವಾ ವಿಸ್ತೀರ್ಣದ ಅನುಗುಣವಾಗಿ ಕೊಟ್ಟಿಲ್ಲ ವೆಂದು ಹೇಳಿದೆ. ಅಲ್ಲಿರತಕ್ಕ ತೊಂದರೆಗಳನ್ನು ಪರಿಶೀಲಿಸಿ ಅದಕ್ಕನುಗುಣವಾಗಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಸಂಬಂಧಪಟ್ಟ ಅಧಿಕಾರಿಗಳದ್ದು ತಪ್ಪು ಇದೆ. ಅದನ್ನು ಮುಚ್ಚುವುದಕ್ಕೆ ಹೋಗಬಾರದು ಎಂದು ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಧಿಕಾರಿಗಳು ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದರೆ, ಆ ರೀತಿ ಮಾನ್ಯ ಸದಸ್ಯರು ಹೇಳಲು ಕಾರಣಗಳಿರಬೇಕು. ಆ ಕಾರಣವನ್ನು ಸರ್ಕಾರಕ್ಕೆ ತಿಳಿಸಿದರೆ ಆದರೆ ನಿಜವೇ ಅಲ್ಲವೇ ಎನ್ನುವುದನ್ನು ಪರಿಶೀಲಿಸಿ ನಭೆಗೆ ತಿಳಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಒಟ್ಟು ಒಂದು ತಾಲ್ಲೂಕಿಗೆ ನಾಲ್ಕು ಲ ರೂಪಾಯಿ, ಒಂದು ತಾಲ್ಲೂಕಿಗೆ ಒಂದೆರಡು ಲಕ್ಷ ರೂಪಾಯಿ ಕೊಟ್ಟಿರುವುದನ್ನು, ಬರಗಾಲ ಹೆಚ್ಚಾಗಿದೆ ಎನ್ನುವುದನ್ನು ಗಮನಿಸಿದರೂ ಕೂಡ ಕೆಲವು ತಾಲ್ಲೂಕುಗಳಿಗೆ ಜಾಸ್ತಿ ಕೊಡಲಾಗಿದೆ ಎನ್ನುವುದನ್ನು ಡಿಸ್ಕ್ರಿಕ್ಟ್

(ಶ್ರೀ ಎಸ್. ಬಂಗಾರಪ್ಪ)

ಡೆವಲಪ್‌ಮೆಂಟ್ ಕಾನ್ಸಿಲ್ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದಾಗ ಅದನ್ನು ಜಿಲ್ಲಾಧಿಕಾರಿಗಳೂ ಒಪ್ಪಿಕೊಂಡಿದ್ದಾರೆ. ಆದುದರಿಂದ ಈಗಲಾದರೂ ಕೂಡ ಈ ತಾರತಮ್ಯ ಮತ್ತು ಹೆಚ್ಚುಕಡಮೆ ಎನ್ನುವುದನ್ನು ನಿರಪಡಿಸಿ ಸಮನಾಗಿ ಬರುವ ಹಾಗೆ ನೋಡಿಕೊಳ್ಳುತ್ತಾರೆಯೇ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿದೆ ಮತ್ತು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆಂದು ಹೇಳಿದರು. ಅವರು ಒಪ್ಪಿಕೊಂಡಿದ್ದರೆ ಅದರಂತೆ ಶಿಫಾರಸು ಕಳುಹಿಸುತ್ತಾರೆ. ಆ ಶಿಫಾರಸಿನಂತೆ ಹಣ ಮಂಜೂರು ಮಾಡುತ್ತೇವೆ. ಆಗ ಎಲ್ಲರಿಗೂ ಸಮಾಧಾನವಾಗುತ್ತೆದೆಂದು ಕಾಣುತ್ತದೆ.

Mr. SPEAKER.—Question Hour is over.

Questions for Answers on the Day

(But not taken up)

Veterinary Facilities in Villages of Davangere Taluk

35. **Smt. C. Nagamma Keshavamurthy** (Davanagere).—

Will the Minister of State for Animal Husbandry be pleased to state :—

(*a*) the details regarding the Veterinary facilities provided in the villages in Davangere Taluk (number of the villages may be furnished);

(*b*) the details of the Veterinary facilities taken up during the current year (1972–73) in Davangere Taluk ?

Sri N. CHIKKE GOWDA (Minister for Animal Husbandry).—

(*a*) There are 3 Veterinary Dispensaries and 5 Rural Veterinary Dispensaries in Davangere Taluk located in the places noted below :—

Veterinary Dispensaries	*Rural Veterinary Dispensaries*
1 Davangere	1 Anagodu
2 Regulated Market Yard, Davangere	2 Hadadi
3 Mayakonda	3 Bada
	Lokikere
	5 Hebbal

In addition, there is one Key Village Sceheme located at Davangere as head quarters with 9 Sub-Centres, as noted below with the normal staff :—

1 Alur

2 Anaji